# ಕರಿಯಾ ಐ ಲವ್ ಯೂ...

ಎರಡು ವರ್ಷದ ಹಿಂದೆ ನಾನು 'ಕೇಳೇ ಗೆಳತಿ' ಬರೆದಾಗ ತುಂಬಾ ಜನ ಓದುಗರು ನನಗೆ ಪ್ರತ್ಯುತ್ತರ ಬರೆದು ನನ್ನ ಬರಹದ ಬಗ್ಗೆ, ನನ್ನ ಗೆಳತಿಯ ಬಗ್ಗೆ, ಆಕೆಯ ಒಲುಮೆಯಕ್ಕರೆಯ ಬಗ್ಗೆ ಮೆಚ್ಚುಗೆ ವ್ಯಕ್ತ ಪಡಿಸಿದ್ದರು, 'ನೀನು ಲಕ್ಕಿ ಮಾರಾಯ' ಅಂತೆಲ್ಲ ಕರುಬಿಕೊಂಡಿದ್ದರು. ಈಗ ಮತ್ತೆ ಈ ನನ್ನ ಅಮ್ಮಮ್ಮನಂತಹ ಗೆಳತಿಗೆ ಹ್ಯಾಪಿ ಬರ್ತ್ ಡೇ ಹೇಳುವ ಸಂದರ್ಭ ಬಂದಿದೆ...
ಕೊನೆಗೂ ಈ ಹುಡುಗಿಯ ಭಯಗಳೆಲ್ಲ ನಿಜವಾಗಿ, ನಮ್ಮೆಲ್ಲರ ಹಟವೂ ವ್ಯರ್ಥವಾಗಿ, ಇವಳಪ್ಪ ಅಮ್ಮಂದಿರ(ಅಂದ್ರೇ ನನ್ನ ಚಿಕ್ಕಪ್ಪ ಚಿಕ್ಕಮ್ಮ) ಮಾತೇ ನಡೆದು ಇವಳ ಮದುವೆ ಅವನೊಂದಿಗೆ ನಿಶ್ಚಯವಾದಾಗ ನಮಗಿಂತ ಮೊದಲೇ ಇವಳು ಬಂದದ್ದೆಲ್ಲವನ್ನು ಸ್ವೀಕರಿಸುವ ನಿರ್ಧಾರ ತೆಗೆದುಕೊಂಡಳು.

ಹಾಗಂತ ಅವನು ಇವಳಿಗೆ ಅಪರಿಚಿತನೇನಾಗಿರಲಿಲ್ಲ. ಇವಳ ಅಮ್ಮನ ಅಣ್ಣನ ಮಗ, ಅವರ ಮನೆಯಲ್ಲಿ ಇವಳೆಂದರೆ ಅಕ್ಕರೆ-ಪ್ರೀತಿ, ಮನೆಗೆ ಸೊಸೆಯಾಗಿ ಬಂದರೆ ಇವಳೇ ಬರಲಿ ಎಂಬ ಮನದಾಳದ ಹಾರೈಕೆ. ಅವನೂ ಒಳ್ಳೆಯ ಹುಡುಗನೇ; ಚುರುಚುರು ಮೀಸೆ, ಸ್ವಲ್ಪವೇ ಸ್ವಲ್ಪ ಡುಮ್ಮಣ್ಣ, ಬೆಂಗಳೂರಿನಲ್ಲಿದ್ದೂ ಹಳ್ಳಿಗಾಡಿನ ಡ್ರೆಸ್ಸಿಂಗ್ ಸೆನ್ಸ್, ನಮ್ಮ 'ಟೆಕ್ನಿಕಲ್' ಅನ್ನೋ ಜೋಕ್-ಗಳನ್ನು ಸುಲಭಕ್ಕೆ ಅರ್ಥ ಮಾಡಿಕೊಳ್ಳಲಾರದವ, ತೊಳೆದ ಕೆಂಡದಂತಹ ಬಣ್ಣ ಎಂಬುದನ್ನು ಬಿಟ್ಟರೆ (ನಂತರ ನಾವೆಲ್ಲ ಅರಿಯುತ್ತಾ ಹೋದಂತೆ) ಅವನ ಮನಸು-ಹೃದಯವೆಲ್ಲ ಸ್ವಚ್ಛ ಸ್ವಚ್ಛ, ಮಾತೂ ಕೃತಿಯೂ ಮೃದು-ಮೃದುಲ, ಯಾರನ್ನೂ ನೋಯಿಸದಂತಹ ಜೀವ (ಬಡಪ್ರಾಣಿ)! ಆದರೆ ನಮ್ಮ ವಯಸ್ಸಿನ ಎಲ್ಲ ಯುವ ಜನರಂತೆ ನಮಗೆ ದೊಡ್ಡ ಅಡಚಣೆಯಾಗಿ ಕಂಡಿದ್ದು ಇವರಿಬ್ಬರ ಬೌದ್ಧಿಕ ಹೊಂದಾಣಿಕೆ. ಅವನು ಯಾವಾಗಲೋ ತನ್ನ ಡಿಪ್ಲೊಮಾ ಮುಗಿಸಿ ಬೆಂಗಳೂರಿನಲ್ಲಿ ಕೆಲಸ ಮಾಡಿಕೊಂಡಿದ್ದ. ಇವಳು ಇಂಗ್ಲೀಷಿನಲ್ಲಿ ಸ್ನಾತಕೋತ್ತರ ಪದವೀಧರೆ. ಮುಂದೆ ಇವಳ ಹೆಚ್ಚುವರಿ ಓದೇ ಸಂಸಾರದಲ್ಲಿ ಹೊಸಾ ಹೊಸಾ ಸಮಸ್ಯೆಗಳನ್ನು ಹುಟ್ಟುಹಾಕುವಂತಾದರೆ? ಅವನಲ್ಲಿ ಕೀಳರಿಮೆಯೆನ್ನೋದು ಹೊಗೆಯಾಡಿದರೆ? ಇವಳ ಓದು, ವೃತ್ತಿ, ಪ್ರವೃತ್ತಿಯೆಲ್ಲ ಇವಳ ಸಾಂಸಾರಿಕ ಜೀವನಕ್ಕೆ ಮುಳ್ಳಾಗಲಾರಂಭಿಸಿದರೆ? ಈ ಹುಡುಗಿ ನಮ್ಮೆಲ್ಲರಲ್ಲೂ ತನ್ನ ಭಯ ತೋಡಿಕೊಂಡಳು, ನಾವೂ ಭಯಂಕರ ಅನ್ನುವಷ್ಟು ವಿಚಾರಣೆ, ಯೋಚನೆ-ಯೋಜನೆಗಳನ್ನೆಲ್ಲ ಮಾಡಿದೆವು, ಆದರೂ ಇದೆಲ್ಲಕ್ಕೂ ಮೀರಿ ಮದುವೆ ಪಕ್ಕಾ ಅಂತಾದಾಗ ಇವಳೆ ನಮಗಿಂತ ಮೊದಲು ಹೊಂದಾಣಿಕೆಯ ಸೂತ್ರ ಪಠಿಸತೊಡಗಿದಳು, ಮದುವೆ ನಿಶ್ಚಯವಾಯ್ತು.

ಮದುವೆ ಎಲ್ಲ ನಿಶ್ಚಯವಾದಂತೆ ಈ ಮನೆಯಲ್ಲಿ ನಾನೇ ನಾನಾಗಿ 'ಗಂಡಿನ ಕಡೆಯವ'ನಾಗಿಬಿಟ್ಟೆ, ಸುಮ್ಮಸುಮ್ಮನೆ ಇವರೆಲ್ಲರ ತಲೆ ತಿನ್ನಲಾರಂಭಿಸಿದೆ:

"ಹೋಗ್ರೆಲೆ ನೀವೆಲ್ಲ ಸೇರ್ಕಂಡು ಸುಲಭವಾಗಿ ಸಿಕ್ಕ ಗಂಡು ಅಂತ ನಮ್ಮವನಿಗೆ ವರದಕ್ಷಿಣೆ ವರೋಪಚಾರ ಏನೂ ಮಾಡ್ತಾ ಇಲ್ಲ!"

"ನೋಡು ನಮ್ಹುಡುಗ ಎಷ್ಟು ಸ್ಮಾರ್ಟು!"

"ಹೊಟ್ಟೆ ಇದ್ರೆ ಏನಂತೆ ನಮ್ಮ ಹುಡುಗ ಬಂಗಾರ!"

"ಕಪ್ಪಾದ್ರೇನಂತೆ ಕಸ್ತೂರಿ ನಮ್ಮ ಗಂಡು!"

"ಮದುವೆಯಾಗಿ ಹೆಣ್ಣು ಹೊರಡಿಸೋ ಹೊತ್ತಿಗೆ ಇವಳಿಗಿಂತ ಅವನೇ ಮೊದ್ಲು ಅತ್ತು ಬಿಡ್ತಾನಾ ಅಂಥಾ?!"

"ಇವರಿಬ್ಬರ ಲವ್ ಡ್ಯೂಯೆಟ್ 'ಕರಿಯಾ ಐ ಲವ್ಯೂ'"

"ಆದ್ರೆ ಅವನಿಗೆ 'ಬೆಳ್ಳಿ ಐ ಲವ್ಯೂ' ಅಂತಾ ಹಾಡೋಕೆ ಚಾನ್ಸೇ ಇಲ್ವಲ್ಲ, ಇವಳದ್ದೂ ಅದೇ ಒರಿಜಿನಲ್ ಕಲರ್! ಸೊ, ಇಬ್ರೂ 'ಕರಿಯಾ ಐ ಲವ್ಯೂ, ಕರ್ಕೀ ಐ ಲವ್ಯೂ' ಅಂತಾ ಹಾಡ್ಕೋಬಹುದು!"

ಮದುವೆಯೂ ಆಯ್ತು! ಹೆಣ್ಣು ಹೊರಡಿಸುವ ಸಮಯದಲ್ಲಿ ಇವರೆಲ್ಲ ಅತ್ತೂ ಕರೆದು ಮಾಡುತ್ತಿದ್ದರೆ ಅವನು ಮುಖ ಸಣ್ಣದು ಮಾಡಿಕೊಂಡು ಗುಂಪಿನಿಂದ ಹೊರಕ್ಕೆ ನನ್ನೆಡೆಗೆ ನಡೆದುಬಂದ. ನಾನು ಒಳಗೊಳಗೇ ನಗುತ್ತಾ "ಯಾಕ್ರೀ ಅಲ್ಲೇ ಜೊತೆಗೆ ಕೈ ಹಿಡ್ಕೊಂಡು ನಿಲ್ಲೋದು ಬಿಟ್ಟು ಈ ಕಡೆ ಬಂದ್ರೀ?" ಅಂದೆ.

"ಅಲ್ಲೆಲ್ಲಾ ಅಳ್ತಾ ಇದಾರಲ್ಲ. ಸಕ್ಕತ್ ಬೇಜಾರಾಗುತ್ತೆ, ನಂಗೆ ಅದೆಲ್ಲ ನೋಡೋಕಾಗಲ್ಲಪ್ಪ!" ಅಂದ.

ಮತ್ತೆ ನಾನು ನುಡಿದಿದ್ದ ಇನ್ನೊಂದು ಭವಿಷ್ಯವಾಣಿಯೂ ನಿಜವಾಗಿ ಅವನು ತನ್ನ ಈ-ಮೇಲ್ ವಿಳಾಸವನ್ನು ಹೊಸದಾಗಿ ಸೃಷ್ಟಿಸಿಕೊಂಡು ತನ್ನ ಹೆಸರಿನ ಮುಂದೆ ಚುಕ್ಕಿಯಿಟ್ಟು ಇವಳ ಹೆಸರಿನರ್ಧವನ್ನು ಸೇರಿಸಿಕೊಂಡು 'ರುದ್ರೇಶ್.ಕಲಾ' ಅಂತ ಬದಲಿಸಿಕೊಂಡ. ("ಪಾಪ ನಮ್ ಹುಡುಗ ಎಷ್ಟು ಒಳ್ಳೆಯವನು ಅಂದ್ರೇ ಮದುವೆಯಾದ ಮೇಲೆ ನೀನೇನೂ 'ಚಂದ್ರಕಲಾ ರುದ್ರೇಶ್ ಅಂತಾ ಹೆಸರು

ಬದಲು ಮಾಡಿಕೊಳ್ಳೋದೇನೂ ಬೇಡ, ಅವನೇ ತನ್ಹೆಸರು ಬದಲಾಯಿಸಿಕೊಂಡು, ಯಾರಾದ್ರೂ ಕೇಳಿದ್ರೆ 'ಹಾಯ್, ನಾನು ರುದ್ರೇಶ್ ಚಂದ್ರಕಲಾ' ಅಂತಾನೆ ಗೊತ್ತಾ?")

ಮದುವೆಯಾದಾಗ ತನ್ನ ಬೀಯೆಡ್ ಓದುವಿಕೆ ಇನ್ನೂ ಅರ್ಧದಲ್ಲಿದ್ದುದರಿಂದ ಇವಳು ಊರಿನಲ್ಲಿ, ಅವನು ಬೆಂಗಳೂರಿನಲ್ಲಿ. ಅವನು ಹೊಸದೊಂದು ಮನೆ ಬಾಡಿಗೆ ಹಿಡಿದ, ಅವಳು ಹದಿನೈದು ದಿನ ಬಂದಿದ್ದು ಮನೆಯನೆಲ್ಲ ಒಪ್ಪ ಓರಣ ಮಾಡಿ ಹೋದಳು ( ಹಾಗೇ ಎಂದಿನಂತೆ 'ಆಫೀಸ್ ಮುಗಿಸ್ಕೊಂಡು ರಾತ್ರಿ ಇಲ್ಲಿಗೇ ಊಟಕ್ಕೆ ಬಾರೋ' ಅಂತ್ಹೇಳಿ ಯಥಾ ಪ್ರಕಾರ ಮೀನು-ಮೊಟ್ಟೆ-ಚಿಕನ್ನು ಅಂತಾ ಮಾಡಿ ನನಗೂ ತನ್ನ ಆಜ್ಞಾಪಾಲಕ ಪತಿದೇವರಿಗೂ ಹೊಟ್ಟೆ ತುಂಬಾ ತಿನ್ನಿಸಿ ಹೋದಳು).

ನಂತರ ಇತ್ತೀಚೆಗೆ ಬೀಯೆಡ್ ಮುಗಿಸಿಕೊಂಡು ತನ್ನ ಸರ್ಕಾರಿ ಶಾಲಾ ಶಿಕ್ಷಕಿಯ ಹುದ್ದೆಯನ್ನು ಬೆಂಗಳೂರಿಗೆ ವರ್ಗ ಮಾಡಿಸಿಕೊಳ್ಳಲು ಇವಳು ಓಡಾಡುತ್ತಿದ್ದಾಗ ಅತ್ತ ಚಿಕ್ಕಮ್ಮ-ಚಿಕ್ಕಪ್ಪರಿಂದ ಹೊಸದೊಂದು ಸುದ್ದಿಯೂ ತಿಳಿದುಬಂತು. ಮೊನ್ನೆ ಮೊನ್ನೆ ಫೋನ್ ಮಾಡಿದಾಗ ನಾನೇ ತೀರಾ ಸಾಮಾನ್ಯವೆಂಬಂತೆ ಕೇಳಿದೆ ಅವಳು 'ಹೌದೆಂದು' ಅಷ್ಟೇ ಸಹಜವಾಗಿ ಒಪ್ಪಿಕೊಂಡಳು. ನಾನು 'ದೇವ್ರೇ, ಆ ಮಗು ಇನ್ನ್ಯಾವ ಕಲರ್ರಲ್ಲಿರುತ್ತೋ!' ಅಂತ ನಗಾಡಿದೆ. ಗಹಗಹಿಸಿ ನಕ್ಕ ಇವಳು ತನ್ನ ಕಾಲೆಳೆಯುವಿಕೆಗೆ ಹೊಸದಾಗಿ ಸಿಕ್ಕ ತನ್ನ ಮುದ್ದು-ಕೃಷ್ಣ ಗಂಡನ ಬಗ್ಗೆ ಹೇಳಲಾರಂಭಿಸಿದಳು. "ಇವನ ಅಕ್ಕ ಹೇಳ್ತಾ ಇದ್ರು, ಮದುವೆಯಾದಮೇಲೆ ಇವನ ಡ್ರೆಸ್ಸಿಂಗ್ ಸೆನ್ಸ್ ಉದ್ದಾರ ಆಗಿದೆಯಂತೆ. ಮೊದೆಲ್ಲಾ ನಮ್ ರುದ್ರೇಶ ಬಟ್ಟೆ ತೆಗೆಯೋಕೆ ಹೋದ್ರೆ ಬರೀ 'ನೀಲಿ'ನೇ ಹಿಡ್ಕಂಡ್ ನಿಲ್ತಿದ್ದ. ಈಗೀಗ ಒಳ್ಳೊಳ್ಳೇ ಬಟ್ಟೆ ಆರಿಸ್ತಾನೆ' ಅಂತಿದ್ರು." ನಾನು ಗಹಗಹಿಸಿದೆ, ಅವಳು ಮುಂದುವರೆಸಿದಳು, "ಈಗಂತೂ 'ಪುಟ್ಟಾ ಪುಟ್ಟಾಂತ' ನನ್ ಹಿಂದೆ ಮುಂದೇನೇ ಓಡಾಡ್ತಾ ಇರ್ತಾನೆ ಕಣೋ! ಹೊಟ್ಟೆ ಡುಮ್ಮಣ್ಣ ಬೇರೇನಾ? ನಾನು ಹೇಳ್ತಾ ಇರ್ತೀನಿ, 'ನನಗಿಂತ ಮೊದಲು ನಿನಗೇ ಹೆರಿಗೆಯಾಗೋ ಹಾಗೆ ಕಾಣ್ತಿದೆ' ಅಂತಾ!!"

ಹೌದು, ಈ ನನ್ನ ಅಮ್ಮಮ್ಮ-ಅಪ್ಪಪ್ಪ ಇನ್ನೈದು ತಿಂಗಳಿಗೆ ಅಮ್ಮ-ಅಪ್ಪ ಆಗ್ತಾ ಇದಾರೆ! ಮತ್ತೆ ಮೊನ್ನೆ ತಾನೇ ಇವಳ ಹುಟ್ಟುಹಬ್ಬ!

**'ಹ್ಯಾಪಿ ಬರ್ತ್ ಡೇ ಕಣೇ ಹುಡುಗಿ!'**

## ಹ್ಯಾವ್ ಎ ನೈಸ್ ಡೇ!

**ಶಿವಕುಮಾರ ಕೆ. ಎಸ್.** shivuks@gmail.com